doc-386
T.P-2

(1)

Reg B G No.155 8 - 10 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹಿಂದಿಭಾಷೆಯಲ್ಲಿ ಪ್ರಮುಖ ತೀರ್ಪುಗಳ ಪ್ರಕಟಣೆ

ಓರಿಯಂಟಲ್ ಡ್ರಾನ್ಸ್

ಮೈಸೂರು ದಸರಾ ವಸ್ತುಪ್ರದರ್ಶನ ನಡೆಯುತ್ತಿರುವ
ಜೀವಣರಾಯನ ಕಟ್ಟೆಯಲ್ಲಿ
ಚಿತ್ತಾಕರ್ಷಕ ಹಾಸ್ಯ ನರ್ತನಗಳು
ತಪ್ಪದೇ ನೋಡಿ ಆನಂದಿಸಿರಿ
ಪ್ರವೇಶಧನ : ರೂ. 1 ಮತ್ತು 50 ಪೈಸೆ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಆಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸಹಾಯವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂತೆ ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಜಾಮರಾಜಪುರಂ, ಮೈಸೂರು 4.

ವನ್ಯಮೃಗ ಸಂಪತ್ತು

ನವದೆಹಲಿ— ಭಾರತದ ವನ್ಯ ಮೃಗ ಸಂಪತ್ತು ಬಹು ಅಮೂಲ್ಯವಾಗಿದೆ ; ಪಶುಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು ಬಗೆಯ ಪಕ್ಷಿಗಳೂ, ಐದನೂರಕ್ಕೂ ಹೆಚ್ಚು ಸಸ್ತನಿ ಪ್ರಾಣಿಗಳೂ, ಮೂವತ್ತು ಸಾವಿರಕ್ಕೂ ಹೆಚ್ಚು ಕೀಟಕ, ಸರ್ಪ ಮತ್ತು ಮತ್ಸ್ಯ ವರ್ಗದ ಜೀವಜಂತುಗಳು ವಾಸಮಾಡುತ್ತಿವೆ.

●

ಬೇಕಾದಷ್ಟು ವಜ್ರ

ಹೈದರಾಬಾದು— ಅಲ್ಟ್ರಾವಯಲೆಟ್ ಲ್ಯಾಂಪಿನೊಡನೆ ಆಂಧ್ರಪ್ರದೇಶದಲ್ಲಿ ಸುತ್ತಾಡಿದರೆ ತಾವು ಲಕ್ಷಾಂತರ ರೂ. ಗಳ ವಜ್ರ ಪಡೆಯಬಹುದೆಂದು ಡಾ|| ಸಿ ವಿ ರಾಮರ್ ಹೇಳಿದರು – ಆದರೆ ಆ ವಜ್ರಗಳಿಗೇನಾ ಹಕ್ಕು ಒಡ್ಡುತ್ತಾಗಿ ತಾವು ಏಕೆ ಹಾಗೆ ಮಾಡಬೇಕೆಂದೂ ನುಡಿದರು

○

ಕೋಸಿ ಅವಾಂತರ

ಪಾಟ್ನಾ— ದರ್ಭಂಗಾ ಜಿಲ್ಲೆಯಲ್ಲಿ ಪ್ರವಾಹಪೂರಿತ ಕೋಸಿನದಿಯು ದಡವನ್ನು 5 ಕಡೆ ಕೊಚ್ಚಿಹಾಕಿದೆ – ಜನನಿಬಿಡ 150 ಗ್ರಾಮಗಳು ನೀರಿನಲ್ಲಿ ನಿಂತಿದೆ – ಸಪಸ್ತಾವು ದನಗಳು ನೀರಿನ ಪಾಲಾದವು.

ತೀರ್ಪುಗಳು ಹಿಂದಿಯಲ್ಲಿ

ನವದೆಹಲಿ— 69 ನೇ ಜನವರಿಯಿಂದ ಭಾರತದ ಹೈಕೋರ್ಟುಗಳ ಪ್ರಮುಖ ತೀರ್ಪುಗಳು ತಿಂಗಳಿಗೊಂದಾವರ್ತಿ ಹಿಂದಿಯಲ್ಲಿ ಪ್ರಕಟಿಸಲಾಗುವದು.

●

ಡಾ|| ಮೋದಿಯವರು

ರಾಯಚೂರು— ಡಾ.|| ಮೋದಿಯವರ ನೇತ್ರ ಚಿಕಿತ್ಸಾ ಶಿಬಿರವು ತಾ|| 2 ರಿಂದ 6 ದಿನಗಳು ಮುಂದುಸಲಾಗಿದೆ.

★

ಬೆಳ್ಳೀ ವಶ

ಬೊಂಬಾಯಿ— ಕೊಲಾಬಾ ಸಮುದ್ರ ತೀರಶಲ್ಲಿ ಬಚ್ಚಿಟ್ಟಿದ್ದ ರೂ. 61 ಲಕ್ಷ ಬೆಲೆಯ ಬೆಳ್ಳೀ ಗಟ್ಟಿಯನ್ನು ವಶಪಡಿಸಿಕೊಳ್ಳಲಾಯಿತು.

●

ದನಗಳ ಅಭಿವೃದ್ಧಿ

ಬೆಂಗಳೂರು— ತುಂಗಭದ್ರಾ ಅಚ್ಕಟ್ ಭಾಗದಲ್ಲಿ ಮುನಿರಾಬಾದಿನಲ್ಲಿ ಒಂದು ದನಗಳ ಅಭಿವೃದ್ಧಿ ಕೇಂದ್ರವನ್ನು ರೂ. 3.5 ಲಕ್ಷ ಖರ್ಚಿನಲ್ಲಿ ಸ್ಥಾಪಿಸಲು ಸರಕಾರ ಯೋಜಿಸಿರುವದಾಗಿ ಪಶುಸಾಲನಾ ಮಂತ್ರಿ ಶ್ರೀ ಜಿ. ಬಿ. ಶಂಕರರಾವ್‌ರವರು ಹೇಳಿದರು.

○

ರಾಮಸ್ವಾಮಿನಾಯಿಕರ್

ತಿರುಚರಪಳ್ಳಿ— ಡಿ ಎಂ ಕೆ ಕರೂರು ಶಾಖೆಯ ಆಶ್ರಯದಲ್ಲಿ ಶ್ರೀ ಇ ವಿ ರಾಮಸ್ವಾಮಿ ನಾಯಿಕರಿಗೆ ಅವರ 90 ನೇ ಜನ್ಮದಿನೋತ್ಸವದಂದು ರೂ. 50000 ಬೆಲೆಯ ಕಾರ್ ಅರ್ಪಿಸಲಾಯಿತು.

★

ಸೆಪ್ಟಂಬರು 29 ರಿಂದ ಅಕ್ಟೋಬರು 2 ರವರೆಗೆ ಕೃಷ್ಣರಾಜಸಾಗರ ಗಾರ್ಡನ್‌ಗೆ 75800 ಪಾದಚಾರಿಗಳೂ, 2560 ವಾಹನಗಳೂ ಬಂದಿದ್ದವು.

ರಾಜಧನ ವಿಷಯ

ರಾಯಪುರ— ರಾಜಧನ ರದ್ದುಪಡಿಸುವ ಮಸೂದೆಯನ್ನು ಮುಂದಿನ ಪಾರ್ಲಿಮೆಂಟು ಅಧಿವೇಶನದಲ್ಲಿ ತರಲಾಗುವುದೆಂದೂ, ರಾಜ್ಯಾಂಗ ತಿದ್ದುಪಡಿ ಅವಶ್ಯವೆಂದೂ ಕೇಂದ್ರ ಗೃಹ ಸ್ಟೇಟ್ ಮಂತ್ರಿ ಶ್ರೀ ವಿದ್ಯಾಚರಣ ಶುಕ್ಲ ತಿಳಿಸಿದರು.

●

ಷೇಕ್ ಅಬ್ದುಲ್ಲರು

ಜಮ್ಮು— ಷೇಕ್ ಅಬ್ದುಲ್ಲರ ಚಟುವಟಿಕೆ ಶಾಂತಿ ರೀತಿಯಿಂದಿರುವವರೆಗೆ ಅವರನ್ನು ದಸ್ತಗಿರಿ ಮಾಡುವ ವಿಚಾರವಿಲ್ಲವೆಂದು ಕಾಶ್ಮೀರದ ಮುಖ್ಯಮಂತ್ರಿ ಸಿದ್ದೀಕ್ ರವರು ಹೇಳಿದರು.

★

ಅಮೇರಿಕಾ ನೆರವು

ನವದೆಹಲಿ— ಮುಂದಿನ ವರ್ಷಕ್ಕೆ ಮುಂಚೆ ಅಮೇರಿಕಾದ ಆಹಾರ ಅಥವಾ ಡಾಲರು ನೆರವು ನಿರೀಕ್ಷಿಸಿ ಇಲ್ಲವೆಂದು ಹೇಳಲಾಗಿದೆ.

●

ಶ್ರೀ ಜಟ್ಟಿಯವರಿಗೆ ಪದವಿ

ನವದೆಹಲಿ— ಮೈಸೂರಿನ ಮಾಜಿ ಮಂತ್ರಿ ಶ್ರೀ ಜಟ್ಟಿಯವರು ಪಾಂಡಿಚೆರಿಲೆ || ಗೌರ್ನರಾಗಿ ನೇಮಿಸಲ್ಪಟ್ಟಿರುವರು.

★

ಅಧ್ಯಕ್ಷರಲ್ಲಿ ಮನವಿ

ನವದೆಹಲಿ— ಜನಸಂಘ, ಎಸ್ಸೆಸ್ಪಿ, ಮತ್ತು ಕಮ್ಯುನಿಸ್ಟು ಪಕ್ಷದ 16 ಮಂದಿ ಪಾರ್ಲಿಮೆಂಟು ಸದಸ್ಯರು ರಾಷ್ಟ್ರಾಧ್ಯಕ್ಷರಿಗೆ ಅರ್ಪಿಸಿದ ಮನವಿಯಲ್ಲಿ ಪ್ರಧಾನಿ ಮತ್ತು ಗೃಹಮಂತ್ರಿಯರನ್ನು ವಜಾ ಮಾಡಬೇಕೆಂದು ಕೋರಿರುವರು – ದೇಶದ ಪರಿಸ್ಥಿತಿಯನ್ನು ನೆಟ್ಟಗಿಡಲು ಅವರು ವಿಫಲಗೊಂಡಿರುವರೆಂದಿರುವರು.

● ಬೊಂಬಾಯಿ— ಡೆಲ್ಲಿ–ಬೊಂಬಾಯಿ ಪಂಜಾಬ್ ಮೇಲ್ ರೈಲಿನ ಊಟದ ಗಾಡಿಗೆ ಬೆಂಕಿ ತಗುಲಿ ಪೂರ್ತಿ ಸುಟ್ಟು ಹೋಯಿತು.

ಹಿಂದೂಗಳ ಆಚಾರ

ಸಂಗ್ರಾಹಕರು—'ಶಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಗರ್ಭಾದಾನ ಕರ್ಮವನ್ನು ನಡೆಸಹೋದಲ್ಲಿ, ಅಂಥಾ ದಂಪತಿಗಳಲ್ಲಿ ಜನಿಸುವ ಪುತ್ರನು ದೂಷ್ಯವಾದ ಕರ್ಮಗಳಲ್ಲಿ ಪ್ರವೃತ್ತನಾಗುತ್ತಾನೆ. ಪತ್ನಿಯು ಮೊದಲ ಗರ್ಭವನ್ನು ಧರಿಸಿದ ಕಾಲದಲ್ಲಿ, ಆ ಗರ್ಭವನ್ನು ನಾಶಮಾಡಲು ರಕ್ತಪಾನ ಮಾಡುವ ರಾಕ್ಷಸರು ಬರುತ್ತಾರೆ. ಅವರ ಪೀಡಾಪರಿಹಾರಾರ್ಥವಾಗಿ (ಗರ್ಭರಕ್ಷಣಾರ್ಥವಾಗಿ) ಸೀಮಂತ ಕರ್ಮವು ನಡೆಯಬೇಕು.

ಜಾತಕರ್ಮ ನಡೆಸುವದರಿಂದ ಗರ್ಭದಲ್ಲಿರುವ ನೀರನ್ನು ಕುಡಿದ ದೋಷವೇ ಮುಂತಾದ ಸರ್ವ ದೋಷಗಳೂ ಪರಿಹಾರವಾಗುತ್ತೆದೆ. ಹುಟ್ಟಿದ ಮಗುವಿಗೆ ಅರಿಷ್ಟಶಾಂತ್ಯರ್ಥವಾಗಿಯೂ, ಸಮಸ್ತ ಆಪತ್ತು ಮತ್ತು ಭಯ ನಿವಾರಣೆಗಾಗಿಯೂ, ಸಮೆಸ್ತ ಸಂಪತ್ತು ವೃದ್ಧಿಯಾಗಲೂ ಜಾತಕರ್ಮವನ್ನು ಮಾಡಬೇಕು.

ಆಯುರ್ವೇದ ವೈದ್ಯ ಸಂಘ, ವಿ ವಿ ಮಾರ್ಕೆಟ್, ಕೆ ಆರ್ ಮೊಹಲ್ಲ, ಮೈಸೂರು 4

ಮೇಲ್ಕಂಡ ಸಂಘದವರು ಈ ತಿಂಗಳು ತಾ || 19 ರಂದು ನಡೆಸುವ ಶ್ರೀ ಧನ್ವಂತರಿ ಜಯಂತೀ ಮಹೋತ್ಸವ ಸಂದರ್ಭದಲ್ಲಿ, ಮೈಸೂರು ಆ || ಕಾ ಲೇ ಜು ವಿಶ್ರಾಂತ ಪಂಡಿತರೂ, ಅಧ್ಯಾಪಕರೂ ಆದ ವೈದ್ಯ ಕೆ. ಎಸ್. ರಾಮಯ್ಯನವರಿಗೂ, ಹರಿಕಥಾವಿದ್ವಾನ್ ಶ್ರೀ ವಿ. ಲಕ್ಷ್ಮೀಪತಿಯವರಿಗೂ, ಇವರುಗಳ ವಿದ್ಯಾ ಪ್ರೌಢವೆ ಆಯುರ್ವೇದಕ್ಕಾಗಿ ಮಾಡಿದ ಸೇವೆ ಮೆಚ್ಚಿ, ಸನ್ಮಾನ ಸಮಾರಂಭ ನಡೆಸಲು ನಿರ್ಣಯ ಮಾಡಿದ್ದಾರೆಂದೂ, ಈ ಕಾರ್ಯಕ್ಕಾಗಿ ಸಂಘದ ಸದಸ್ಯರು ರೂ. 10 ಮತ್ತು ಸದಸ್ಯೇತರ 3 ರೂ. ಗಳಿಗೆ ಕಡಮೆಯಿಲ್ಲದೆ ತಾ|| 10 ರೊಳಗೆ ಕಳುಹಿಸಬೇಕೆಂದೂ ವಿಜ್ಞಾಪಿಸಲ್ಪಟ್ಟಿದೆ.

ವುಡ್‌ಲಾಂಡ್ ಜನಪ್ರಿಯತ 4ನೇ ವಾರ
ವೈಭವ ಆರಂಭ
— ಮನಮೋಹಕ ಹಿಂದಿ ಚಿತ್ರ —
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
.... ಮಿಲಿಯಗಟ್ಟಲೆ ಖರ್ಚಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....
ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬ್ಲಾಲ್ ಖಾನ್ಸ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— ಜನಪ್ರಿಯ 6 ನೇ ವಾರ
ಚಿತ್ತಾಕರ್ಷ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Printing — Neat Binding
Lakshminarasimha Press
Sivarampet, Mysore

ಆಶೋಕ ಏಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳೂ ಸನ್ಮಲ್ಲಿ ದೊರೆಯುತ್ತವೆ

SHAKTI
SUDHA
A Superb Tonic

Protect the Cow



ಗೋರಕ್ಷಣೆ ಮತ್ತು ಪಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

Cow Slaughter should be banned Immediately

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4